ಓ:ಎಸ್:ನಂ.28/2016

ಪಿ.ಡಬ್ಲ್ಯೂ- 1

<u>ದಿ: 05-01-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿ ಪಿ ಆರ್ ವಕೀಲರಿಂದ</u>

ಅನುವನಹಳ್ಳಿ ಗ್ರಾಮಕ್ಕೆ ಸೇರಿದ ನಕ್ಷೆಯನ್ನು ತಾವೇನಾದರೂ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವ ಎ ಷೆಡ್ಯೂಲ್ ಸ್ವತ್ತುಗಳು ನನಗೆ ಪಾಲುಪರಿಕತ್ತು ಮುಖಾಂತರ ಬಂದ ಸ್ವತ್ತುಗಳು ಆಗಿರುತ್ತವೆ. ಸದರಿ ಪಾಲು ಪಾರಿಕತ್ತು ನೋಂದಣಿವಲ್ಲದ ದಾಖಲೆಯಾಗಿರುತ್ತದೆ. ಸದರಿ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವ ಎ ಷೆಡ್ಯೂಲ್ ಸ್ವತ್ತಿನ ಚಕ್ಕುಬಂದಿಯನ್ನು ತೋರಿಸಲು ತಾವು ನ್ಯಾಯಾಲಯಕ್ಕೆ ಯಾವ ದಾಖಲಾತಿಯನ್ನು ಕೊಟ್ಟಿದ್ದೀರಿ ಎಂದರೆ ಹಾಜರುಪಡಿಸಿದ್ದೇನೆಂದು ಸಾಕ್ಷ್ಯ ನುಡಿಯುತ್ತಾರೆ. ನಿಪಿ-5 ರಲ್ಲಿ ನಮೂದಾಗಿರುವ ಪಾಲು ಪಾರಿಕತ್ತನ್ನು ಯಾವ ಕಾರಣಕ್ಕೆ ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಸದರಿ ದಾಖಲಾತಿ ನಮ್ಮ ಬಳಿ ಇದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ದಾವ ಎ ಷೆಡ್ಯೂಲ್ ಸ್ವತ್ತುಗಳಲ್ಲಿ ನಮೂದು ಮಾಡಿರುವ ಚಕ್ಕುಬಂದಿ ವಿಭಾಗ ಪತ್ರದ ಮೂಲಕ ನನಗೆ ಬಂದಿರುವ ಇ ಷೆಡ್ಯೂಲ್ ನಲ್ಲಿ ನಮೂದು ಆಗಿದೆಯೇ ಎಂದರೆ ಸಾಕ್ಷಿ ನಮೂದು ಆಗಿದೆ ಎಂದು ಸಾಕ್ಷ್ಯ ನುಡಿಯುತ್ತಾರೆ.

ಪ್ರತಿವಾದಿಯು ನನ್ನ ದೊಡ್ಡಪ್ಪನ ಮಗ. ಪ್ರತಿವಾದಿಗೆ ಸೇರಿದ ಜಮೀನಿನ ಸರ್ವೆ ನಂ.92/ಬಿ ಮತ್ತು 92/3. ಪ್ರತಿವಾದಿಗಳ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಕಣಬಘಟ್ಟೆಯಿಂದ ನಾರಾಣಪುರಕ್ಕೆ ಹಾದುಹೋಗುವ ರಸ್ತೆ ಇದೆ ಎಂದರೆ ಸರಿ. 12 ಇಂಟು 200 ಅಡಿ ಜಾಗವನ್ನು ರಸ್ತೆಗಾಗಿ ಬಿಟ್ಟುಕೊಡಬೇಕು ಎಂಬ ಬಗ್ಗೆ ನಮ್ಮ ಗ್ರಾಮದಲ್ಲಿ ಪಂಚಾಯಿತಿ ಆಗಿತ್ತು. ಪ್ರತಿವಾದಿಯು ನಮಗೆ ರಸ್ತೆಗಾಗಿ ಬಿಟ್ಟುಕೊಟ್ಟಿರುವ ಜಾಗವನ್ನು ನಾವು ಅವರ ಜಮೀನನ್ನು ಪ್ರತಿವಾದಿಗೆ ಬಿಟ್ಟುಕೊಡಬೇಕೆಂದು ಮಾತುಕತೆಯಾಗಿತ್ತು. ಸದರಿ ವಿಚಾರಗಳನ್ನು ನಾನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗೆ ರಸ್ತೆಯ ಸಲುವಾಗಿ ನಾನು ಒಂದು ಗುಂಟೆ ಜಮೀನನ್ನು ಬಿಟ್ಟುಕೊಟ್ಟಿದ್ದೇನೆ ಎಂಬುದು ಕಲ್ಪಿತ ಸಂಗತಿ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಜಮೀನಿನ ಸುತ್ತ ಎಲ್ಲಾ ಕಡೆ ತೆಂಗಿನ ಮರಗಳನ್ನು ಬೆಳೆಸಿದ್ದಾರೆಂದರೆ ಸರಿಯಲ್ಲ. ನನಗೆ ಎ ಷೆಡ್ಯೂಲ್ ಸ್ವತ್ತುಗಳಿಗೆ ಹೋಗಲು ಬೇರೆ

ದಾರಿ ಇದ್ದರೂ ಸಹ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ನಮೂದು ಮಾಡಿರುವ ದಾರಿಯನ್ನು ಕೇಳಿರುತ್ತೇನೆಂದರೆ ಸರಿಯಲ್ಲ. ಸರ್ವೆ ನಂ.*92* ನ ಜಮೀನು ಪೂರ್ವ ಪಶ್ಚಿಮದ ಕಡೆ ಉದ್ದವಾಗಿದೆ. ದಾವ ಎ ಷೆಡ್ಯೂಲ್ ಸ್ವತ್ತಿಗೆ ನಾನು ಉತ್ತರ ಕಡೆಯಿಂದ ಬರಬಹುದೆಂದರೆ ಸರಿಯಲ್ಲ. ಪ್ರತಿವಾದಿಯು ತಮ್ಮ ಜಮೀನಿನ ಸುತ್ತಲೂ ತೆಂಗಿನ ಮರಗಳನ್ನು ಬೆಳೆಸಿದ್ದಾರೆಂದರೆ ಸಾಕ್ಷಿಯು ಒಂದು ದಿನದ ಮಟ್ಟಿಗೆ ತೆಂಗಿನ ಗಿಡವನ್ನು ನೆಟ್ಟಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. ನಿಪಿ-*14* ರಲ್ಲಿ ಕಾಣುತ್ತಿರುವ ತೆಂಗಿನ ಮರಗಳು ಈಗ ಆಸ್ತಿತ್ವದಲ್ಲಿ ಇಲ್ಲ. ದಾವ ಎ ಮತ್ತು ಬಿ ಷೆಡ್ಯೂಲ್ ನಲ್ಲಿ ನಮೂದು ಮಾಡಿರುವ ಚೆಕ್ಕುಬಂದಿ ಒಳಗೆ ಸದರಿ ಆಸ್ತಿಗಳು ಆಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***